"ಮಧುರ ಮಕ್ಕಳೇ - ನಿಮ್ಮನ್ನು ಸತ್ಯ-ಸತ್ಯ ವೈಷ್ಣವರನ್ನಾಗಿ ಮಾಡಲು ತಂದೆ ಬಂದಿದ್ದಾರೆ, ಈಗ ನೀವು ಪರಿವರ್ತನೆ ಆಗಿ ಪತಿತರಿಂದ ಪಾವನರಾಗುತ್ತಿದ್ದೀರಿ"

ಪ್ರಶ್ನೆ: ಸರ್ವ ಕಾಮನೆಗಳನ್ನು ಪೂರ್ಣ ಮಾಡುವಂತಹ ನಿಮ್ಮ ಬಿರುದು ಏನು? ನೀವು ಯಾವ ಕಾಮನೆಯನ್ನು ಪೂರ್ಣ ಮಾಡಬೇಕು?

ಉತ್ತರ: ನೀವು ಸರ್ವರ ಮಮನೋಕಾಮನೆಗಳನ್ನು ಪೂರ್ಣ ಮಾಡುವಂತಹ ಜಗದಂಬಾರವರ ಮಕ್ಕಳು ಕಾಮಧೇನು ಆಗಿದ್ದೀರಿ. "ನಮಗೆ ಮುಕ್ತಿ-ಜೀವನ್ಮುಕ್ತಿ" ಪ್ರಾಪ್ತಿ ಆಗಬೇಕೆಂಬ ಆಸೆ ಎಲ್ಲರಿಗೂ ಇದೆ. ನೀವು ಜಗದಂಬಾ, ಜಗತ್‌ಪಿತನ ಮಕ್ಕಳು ಎಲ್ಲರಿಗೂ ಮುಕ್ತಿ-ಜೀವನ್ಮುಕ್ತಿಯ ದಾರಿ ತೋರಿಸುತ್ತಾ ಇರಿ, ಇದೇ ನಿಮ್ಮ ಕರ್ತವ್ಯವಾಗಿದೆ.

ಗೀತೆ: ಓ ಮಾತಾ ನೀನು ಜಗತ್‌ಮಾತಾ ಆಗಿದ್ದೀಯಾ.............

ಓಂ ಶಾಂತಿ. ಇದು ಮಮ್ಮಾರವರ ಸಲುವಾಗಿ ಭಕ್ತರ ಮಹಿಮೆಯಾಗಿದೆ. ಭಕ್ತರನ್ನು ರಕ್ಷಣೆ ಮಾಡುವವರೆಂದು ಹೇಳುತ್ತಾರೆ. ಇದು ಭಕ್ತಿಮಾರ್ಗದ ಮಹಿಮೆಯಾಗಿದೆ. ಶಿವ ತಂದೆಯ ಮಹಿಮೆಯ ಹಿಂದೆ ಮಮ್ಮಾರವರ ಮಹಿಮೆಯಿದೆ. ಯಾವಾಗ ಪರಮಪಿತ ಪರಮಾತ್ಮ ಶಿವ ಬರುತ್ತಾರೆ, ಆಗ ಜಗದಂಬಾರವರನ್ನು ರಚಿಸುತ್ತಾರೆ. ರಚನೆ ಮಾಡುವ ಅರ್ಥ ಪರಿವರ್ತನೆ ಮಾಡುವುದಾಗಿದೆ. ಪತಿತರನ್ನು ಪಾವನ ಮಾಡುತ್ತಾರೆ. ಈ ಸಮಯ ಜಗದಂಬಾ ಒಬ್ಬರೇ ಆಗಿದ್ದಾರೆ. ಹಾಗೆಯೇ ಶಿವನ ಚಿತ್ರವೂ ಒಂದೇ ಆಗಿದೆ. ಪುನಃ ಅವರಿಗೆ ಭಿನ್ನ-ಭಿನ್ನ ನಾಮ ರೂಪಗಳಿಂದ ಭಿನ್ನ-ಭಿನ್ನ ಮಂದಿರಗಳನ್ನು ಮಾಡಿದ್ದಾರೆ. ಅನೇಕ ಪ್ರಕಾರದಲ್ಲಿ ಮಹಿಮೆ ಮಾಡುತ್ತಾರೆ. ಪರಮಪಿತ ಪರಮಾತ್ಮ ಒಬ್ಬರೇ ಆಗಿದ್ದಾರೆ. ಅದೇರೀತಿ ಜಗದಂಬಾ ಸರಸ್ವತಿಯೂ ಸಹ ಒಬ್ಬರೇ ಆಗಿದ್ದಾರೆ. ಕೇವಲ ಎರಡು ಭುಜಧಾರಿಗಳಾಗಿರುವರೇ ವಿನಃ ಅಷ್ಟ ಭುಜಧಾರಿ ಯಾವ ದೇವೀ-ದೇವತೆಗಳು ಇರಲು ಸಾಧ್ಯವಿಲ್ಲ. ಪ್ರಜಾಪಿತ ಅಥವಾ ಜಗದಂಬಾ ಸಹ ಎರಡು ಭುಜಧಾರಿಯಾಗಿದ್ದಾರೆ. ಜಗದಂಬಾರವರ ಮಹಿಮೆಯನ್ನು ಕಲ್ಕತ್ತಾದಲ್ಲಿ ಬಹಳ ಮಾಡುತ್ತಾರೆ. ಕಲ್ಕತ್ತಾದ ಕಾಳಿ ಎಂಬ ಪ್ರಖ್ಯಾತವಿದೆ. ಅವರ ಚಿತ್ರವನ್ನು ತುಂಬಾ ಭಯಾನಕವಾಗಿ ಮಾಡಿದ್ದಾರೆ. ರುಂಡ ಮಾಲೆಯನ್ನು ತೊಡಿಸುತ್ತಾರೆ. ಇದೆಲ್ಲವೂ ಭಕ್ತಿಮಾರ್ಗವಾಗಿದೆ. ಜಗದಂಬಾ ಎಂದಿಗೂ ಬಲಿ ತೆಗೆದುಕೊಳ್ಳುವುದಿಲ್ಲ, ಅವರು ಜಗತ್ತನ್ನು ರಚಿಸುವವರಾಗಿದ್ದಾರೆ ಆದುದರಿಂದ ಅವರು ಬಲಿ ತೆಗೆದುಕೊಳ್ಳಲು ಸಾಧ್ಯವಿಲ್ಲ ಹಾಗೂ ಮಾಂಸಾಹಾರಿಯು ಸಹ ಹೇಗೆ ಆಗಲು ಸಾಧ್ಯ? ಜಗದಂಬಾರವರ ಮಂದಿರವು ಕೇವಲ ಕಲ್ಕತ್ತಾದಲ್ಲಿ ಮಾತ್ರ ಇಲ್ಲ. ಬಹಳ ಸ್ಥಾನಗಳಲ್ಲಿ ಮಾಡಿದ್ದಾರೆ. ತಾಯಿ ತನ್ನ ಮಕ್ಕಳನ್ನು ಎಂದಾದರೂ ಬಲಿ ತೆಗೆದುಕೊಳ್ಳುವರೇನು!!? ಭಕ್ತಿ ಎಷ್ಟೊಂದು ಕಠಿಣವಾಗಿದೆ. ಈಗ ಅವರಿಗೆ ಯಾರಾದರೂ ಕುಳಿತು ತಿಳಿಸಿಕೊಡಬೇಕು- ಜಗದಂಬಾರವರ ಇಂತಹ ಭಯಾನಕ ರೂಪ ಇರುವುದಿಲ್ಲ, ಹಾಗೂ ಬಲಿಯನ್ನೂ ಸಹ ತೆಗೆದುಕೊಳ್ಳುವುದಿಲ್ಲ. ಅವರಲ್ಲಿಯೂ ಸಹ ಒಬ್ಬರು ವೈಷ್ಣವ ದೇವಿಯಾಗಿದ್ದು ಮತ್ತೊಬ್ಬರು ಮಾಂಸಾಹಾರಿ ಆಗಿದ್ದಾರೆ. ಈಗ ಮಾಂಸಾಹಾರಿ ಆಗಿರುವವರೇ ವೈಷ್ಣವದೇವಿ ಆಗುತ್ತಾರೆ. ಹೀಗೆ ಮಮ್ಮಾ ಕುಮಾರಿಯಾಗಿದ್ದು ಎಂದಾದರೂ ಬಹುಶಃ ತಿಂದಿರಬೇಕು. ಜಗದಂಬಾ ಬ್ರಹ್ಮನ ಮಗಳು ಕುಮಾರಿಯಾಗಿದ್ದಾರೆ. ಈಗ ಈ ಕುಮಾರಿಗೆ ಅಂಬೆ (ತಾಯಿ) ಎಂದು ಹೇಗೆ ಹೇಳುವುದು? ಇದೆಲ್ಲವೂ ತಿಳಿದುಕೊಳ್ಳುವ ಮಾತುಗಳಾಗಿವೆ. ಕಲ್ಕತ್ತಾದಲ್ಲಿ ಬಹಳ ಪೂಜೆ ಮಾಡುತ್ತಾರೆ ಹಾಗೂ ಮೂರ್ತಿಯನ್ನು ಭಯಾನಕವಾಗಿ ತೋರಿಸಿದ್ದಾರೆ ಆದರೆ ಜಗದಾಂಬಾರವರಿಗೆ ಆ ರೀತಿ ಭಯಾನಕವಾದ ಮುಖವಿರಲು ಸಾಧ್ಯವಿಲ್ಲ. ಇವರು ಎಲ್ಲರ ಮನೋಕಾಮನೆಗಳನ್ನು ಪೂರ್ಣ ಮಾಡುತ್ತಾರೆ. ಸತ್ಯ-ಸತ್ಯ ವೈಷ್ಣವ ದೇವಿಯೂ ಸಹ ಇವರೇ ಆಗಿದ್ದಾರೆ. ಅಗತ್ಯವಾಗಿ ಅವರ ಹಿಂದಿನ ಜನ್ಮದಲ್ಲಿ ಮಾಂಸಾಹಾರಿ ಆಗಿರಬೇಕು ನಂತರ ವೈಷ್ಣವ ಅರ್ಥಾತ್ ಪಾವನ ದೈವೀಗುಣವುಳ್ಳವರು ಆಗುತ್ತಿದ್ದಾರೆ. ಇದು ಇಡೀ ಸಂಗಮಯುಗದ ಮಾತಾಗಿದೆ. ಮೊದಲು ನಿರಾಕಾರಿ ಆತ್ಮಗಳ ತಂದೆ ಒಬ್ಬರೇ ಆಗಿದ್ದಾರೆ. ನಂತರ ಸಾಕಾರಪಿತ ಪ್ರಜಾಪಿತ ಬ್ರಹ್ಮಾ ಒಬ್ಬರೇ ಆಗಿದ್ದಾರೆ. ಬ್ರಹ್ಮನ ಮಗಳು ಸರಸ್ವತಿಯೂ ಸಹ ಒಬ್ಬರೇ ಆಗಿದ್ದಾರೆ. ಆದುದರಿಂದ ಅವರು ಬಲಿ ಮೊದಲಾದವುಗಳನ್ನು ತೆಗೆದುಕೊಳ್ಳುವುದಿಲ್ಲ. ಮೊದಲು ಸುಂದರ (ಪಾವನ) ವಾಗಿದ್ದರು, ಈಗ ಪತಿತರಾಗಿದ್ದಾರೆ. ಇಡೀ ಕುಟಂಬವೇ ಪಾವನವಾಗುತ್ತದೆ. ಜಗದಂಬಾರವರ ಚಿತ್ರವನ್ನು ಎರಡು ಭುಜಧಾರಿಯನ್ನಾಗಿ ತೋರಿಸುತ್ತಾರೆ. ಇದೆಲ್ಲವೂ ತಿಳಿದು ತಿಳಿಸಿಕೊಡುವ ಮಾತುಗಳಾಗಿವೆ. ಕೆಲವರಂತೂ ಜಗಳ ಸಹ ಮಾಡುತ್ತಾರೆ. ತೊಂದರೆಗಳು ಬಹಳ ಆಗುತ್ತಿರುತ್ತವೆ. ತೊಂದರೆಗಳು ತಡವಾಗುವುದಿಲ್ಲ. ಈ ಎಲ್ಲಾ ಮಾತುಗಳನ್ನು ಬುದ್ಧಿವಂತರು ಮಾತ್ರ ತಿಳಿದುಕೊಳ್ಳುತ್ತಾರೆ.

ಮಕ್ಕಳು ನೀವು ಕಲ್ಯಾಣಕಾರಿಗಳಾಗಿದ್ದೀರಿ. ಮಮ್ಮಾ ಮೊದಲು ಕಲ್ಕತ್ತಾಗೆ ಹೋದಾಗ ಇಂತಹ ಮುರಳಿಯನ್ನು ಬಾಬಾ ನುಡಿಸಿರಲಿಲ್ಲ. ಜಗದಂಬಾ ಒಬ್ಬರೇ ಆಗಿದ್ದಾರೆ. ನೀವು ಅವರಿಗೆ ಅನೇಕ ಮಕ್ಕಳಾಗಿದ್ದೀರಿ. ಉದಾಹರಣೆಗೆ ಒಬ್ಬರ ಹೆಸರನ್ನು ಮಾತ್ರ ತೆಗೆದುಕೊಳ್ಳಲಾಗುತ್ತದೆ. ಒಬ್ಬರ ಹೆಸರಿನಲ್ಲಿ ಅನೇಕ ಮಂದಿರಗಳನ್ನು ಮಾಡಿದ್ದಾರೆ. ಈಗ ಕಲ್ಕತ್ತಾದಲ್ಲಿ ಭಕ್ತರನ್ನು ಈ

ಪೂಜೆಯಿಂದ ಹೇಗೆ ಬಿಡಿಸುವುದು? ಅವರನ್ನೂ ಸಹ ಪೂಜ್ಯರನ್ನಾಗಿ ಮಾಡಬೇಕಲ್ಲವೇ! ಯಾರಾದರೂ ಅಲ್ಲಿಗೆ ಹೋಗಿ ತಿಳಿಸಿಕೊಡಬೇಕು. ಈಗ ಸರ್ವರ ಮನೋಕಾಮನೆಗಳನ್ನು ಪೂರ್ಣ ಮಾಡುವಂತಹ ಜಗದಂಬಾ ಕುಳಿತಿದ್ದಾರೆ. ಅವರೇ ಕಾಮಧೇನು ಆಗಿದ್ದಾರೆ ಆದರೆ ಹೇಗೆ ಸರ್ವರ ಮನೋಕಾಮನೆಗಳನ್ನು ಪೂರ್ಣ ಮಾಡುತ್ತಾರೆಂದು ಯಾರೂ ತಿಳಿದುಕೊಂಡಿಲ್ಲ. ನೀವು ಕಾಮಧೇನು ಜಗದಂಬಾರವರ ಮಕ್ಕಳಾಗಿದ್ದೀರಿ. ಕೇವಲ ಗೋಮಾತೆ ಮಾತ್ರವೇ ಅಲ್ಲ ಪುರುಷರೂ ಇರುತ್ತಾರೆ. ಅವರೂ ಸಹ ಅನೇಕರ ಕಾಮನೆಗಳನ್ನು ಪೂರ್ಣ ಮಾಡುತ್ತಾರೆ. ನಿಮ್ಮ ಕರ್ತವ್ಯವೇ ಸರ್ವರ ಮನೋಕಾಮನೆಗಳನ್ನು ಪೂರ್ಣ ಮಾಡುವುದಾಗಿದೆ. ಕೆಲವು ಕಡೆ ಸಹೋದರರೂ ಸಹ ಸೇವಾಕೇಂದ್ರವನ್ನು ನಡೆಸುತ್ತಾರೆ. ಅವರಿಗೂ ಸಹ ಮನಸ್ಸಿನಲ್ಲಿ ಸರ್ವರ ಮನೋಕಾಮನೆಗಳನ್ನು ಪೂರ್ಣ ಮಾಡೋಣವೆಂಬ ಸಂಕಲ್ಪ ಬರುತ್ತದೆ. ಅರ್ಥಾತ್ ಮುಕ್ತಿ-ಜೀವನ್ಮುಕ್ತಿಯ ಮಾರ್ಗವನ್ನು ತೋರಿಸಿ ಸ್ವರ್ಗದ ಆಸ್ತಿಯನ್ನು ಕೊಡೋಣ. ಯಾರು ಕಲ್ಪದ ಹಿಂದೆ ಪಡೆದುಕೊಂಡಿದ್ದರೋ ಅವರೇ ಪಡೆದುಕೊಳ್ಳುತ್ತಾರೆ. ಹಾ! ಅಲ್ಲಿ ಎಲ್ಲಾ ಪ್ರಕಾರದ ಸುಖ ಪ್ರಾಪ್ತಿಯಾಗುತ್ತದೆ. ಜಗದಂಬಾ, ಜಗತ್‌ಪಿತ ಇವರಿಬ್ಬರ ರಚಯಿತ ಶಿವ ತಂದೆ ಆಗಿದ್ದಾರೆ. ಇವರ ಮೂಲಕ ಮನೋಕಾಮನೆಗಳು ಪೂರ್ಣ ಆಗುತ್ತವೆ. ಕಲ್ಕತ್ತಾದಲ್ಲಿ ಇವರನ್ನು ಬಹಳ ಪೂಜೆ ಮಾಡುತ್ತಾರೆ. ಯಾರಿಗೆ ಯಾರು ಇಷ್ಟ ಇರುತ್ತಾರೆ, ಅವರನ್ನು ಪೂಜೆ ಮಾಡುತ್ತಾರೆ. ಕೆಲವರು ವೈಷ್ಣವ ದೇವಿಯನ್ನು ಸಹ ಮಾನ್ಯತೆ ಮಾಡುತ್ತಾರೆ. ಈಗ ಈ ಮಾತುಗಳಿಂದ ತಕ್ಷಣ ತೃಪ್ತರಾಗಿ ಬಿಡುತ್ತಾರೆ. ಈ ಜಗದಂಬಾ ಮೂಲಕ ನಿಮಗೆ ರಾಜ್ಯಭಾಗ್ಯ ಪ್ರಾಪ್ತಿಯಾಗಿತ್ತು. ಜಗದಂಬಾರವರಿಗೆ ಎಲ್ಲಿಂದ ಪ್ರಾಪ್ತಿ ಆಯಿತು? ಬಹಳ ಭುಜಗಳೇನೂ ಇಲ್ಲ. ಸರಸ್ವತಿ ಬ್ರಹ್ಮನ ಮಗಳು ಜ್ಞಾನ-ಜ್ಞಾನೇಶ್ವರಿ ಆಗಿದ್ದಾರೆ ಆದರೆ ಅವರಿಗೆ ಭಯಾನಕ ರೂಪವನ್ನು ತೋರಿಸಿ ಬಿಟ್ಟಿದ್ದಾರೆ. ಜಗದಂಬಾರವರಿಗೆ ಇಂತಹ ಭಯಾನಕ ರೂಪವಿಲ್ಲವೆಂದು ತಿಳಿಸಿಕೊಡಬೇಕು. ಸತೋಪ್ರಧಾನ ಮನುಷ್ಯರಿಂದ ಮತ್ತೆ ತಮೋಪ್ರಧಾನ ಮನುಷ್ಯರಾಗುತ್ತಾರೆ. ತಮೋಪ್ರಧಾನ ಮನುಷ್ಯರು ಮತ್ತೆ ಸತೋಪ್ರಧಾನ ಮನುಷ್ಯರನ್ನು ಪೂಜೆ ಮಾಡುತ್ತಾರೆ. ಜಗದಂಬಾ ಸಹ ಮನುಷ್ಯರಾಗಿದ್ದಾರೆ ಏಕೆಂದರೆ ಮನುಷ್ಯರಿರುವುದು ಈ ಸಾಕಾರ ಜಗತ್ತಿನಲ್ಲೇ. ಮೂಲವತನ ಹಾಗೂ ಸೂಕ್ಷ್ಮವತನದಲ್ಲಿರುವವರಿಗೆ ಜಗದಂಬಾ ಎಂದು ಹೇಳುವುದಿಲ್ಲ. ಏಕೆಂದರೆ ಆ ಜಗತ್ತಿರುವುದು ಈ ಸೃಷ್ಟಿಯಲ್ಲೇ. ಮೂಲವತನದಲ್ಲಿ ಆತ್ಮಗಳಿರುತ್ತಾರೆ ಸೂಕ್ಷ್ಮವತನದಲ್ಲಿ ಸೂಕ್ಷ್ಮ ದೇವತೆಗಳಿರುತ್ತಾರೆ. ಈ ಎಲ್ಲಾ ಮಾತುಗಳು ತಿಳಿದುಕೊಳ್ಳುವ ಮಾತುಗಳಾಗಿವೆ. ಕೇವಲ ತಂದೆ ಹಾಗೂ ಆಸ್ತಿಯನ್ನು ನೆನಪು ಮಾಡಬೇಕು. ಎಂಬತ್ತ ನಾಲ್ಕು ಜನ್ಮಗಳ ಕಥೆಯನ್ನು ಭಾರತವಾಸಿಯರು ಮಾತ್ರ ಕೇಳಬೇಕು. ಯಾರು ದೇವೀ-ದೇವತೆಗಳಾಗಿದ್ದರು, ಇಂದು ಅವರು ಇಲ್ಲವಾಗಿದ್ದಾರೆ. ದೇವೀ-ದೇವತೆಗಳ ಪೂಜಾರಿಗಳು ಈ ಮಾತುಗಳನ್ನು ಬಹಳ ಚೆನ್ನಾಗಿ ತಿಳಿದುಕೊಳ್ಳುತ್ತಾರೆ. ಅವರೇ ಪುನಃ ಶ್ರೇಷ್ಠ ಪದವಿಯನ್ನು ಪ್ರಾಪ್ತಿ ಮಾಡಿಕೊಳ್ಳುವ ಸಲುವಾಗಿ ಶ್ರಮ ಪಡುತ್ತಾರೆ. ಕೆಲವು ಮಕ್ಕಳು ನಾವು ತಂದೆಯ ಮಕ್ಕಳಾಗಿದ್ದೇವೆ, ಅಗತ್ಯವಾಗಿ ಶ್ರೇಷ್ಠ ಪದವಿಯನ್ನು ಪಡೆದುಕೊಳ್ಳುತ್ತೇವೆಂದು ತಿಳಿದುಕೊಳ್ಳುತ್ತಾರೆ ಆದರೆ ಆರಂಭದಲ್ಲಿ ಬಹಳ ಚೆನ್ನಾಗಿ ಓದುತ್ತಾ ಉನ್ನತ ಪದವಿಯನ್ನು ಪಡೆಯುತ್ತಾರೆ. ಓದುವುದಿಲ್ಲವೆಂದರೆ ವಿಕರ್ಮವೂ ಸಹ ವಿನಾಶವಾಗದೆ ಶಿಕ್ಷೆ ತಿಂದು ಮತ್ತೆ ನೌಕರ, ಚಾಕರ, ದಾಸ-ದಾಸಿಯರಾಗುತ್ತಾರೆ ಏಕೆಂದರೆ ತುಂಬಾ ವಿಕರ್ಮವು ಹಾಗೆಯೇ ಉಳಿದು ಅನೇಕ ಜನ್ಮಗಳು ದಾಸಿಯಾಗಿ ಅಂತ್ಯವಾಗುತ್ತಾ ಕೊನೆಯಲ್ಲಿ ಸ್ವಲ್ಪ ಶ್ರೇಷ್ಠ ಪದವಿ ಪಡೆದುಕೊಂಡರೆ ಏನು ಲಾಭವಾಯಿತು. ಇದಕ್ಕಿಂತ ಪ್ರಜೆಗಳ ಬಳಿ ಬಹಳ ಧನವಿರುತ್ತದೆ. ಅವರು ಯಾರಿಗೂ ದಾಸ-ದಾಸಿಯರಾಗುವುದಿಲ್ಲ. ಇದೆಲ್ಲವೂ ಬಹಳ ತಿಳಿದುಕೊಳ್ಳುವ ಮಾತುಗಳಾಗಿವೆ, ಬಾಕಿ ತಂದೆಯು ಮೂಲ ಮಾತುಗಳನ್ನು ತಿಳಿಸುತ್ತಿದ್ದಾರೆ - ವೈಷ್ಣವ ದೇವಿ ಮತ್ತೆ ಅವರೇ ಲಕ್ಷ್ಮೀ ಆಗುತ್ತಾರೆ. ಲಕ್ಷ್ಮೀಯ ಮಂದಿರ ದೊಡ್ಡದಾಗಿರುತ್ತದೋ ಅಥವಾ ವೈಷ್ಣವ ದೇವಿಯ ಮಂದಿರ ದೊಡ್ಡದಾಗಿರುತ್ತದೋ? ಯಾರ ಮಹಿಮೆ ಶ್ರೇಷ್ಠವಾಗಿದೆ? ಅವರು ಜ್ಞಾನ-ಜ್ಞಾನೇಶ್ವರಿ ಆಗಿದ್ದಾರೆ, ಲಕ್ಷ್ಮಿಯನ್ನು ಜ್ಞಾನ-ಜ್ಞಾನೇಶ್ವರಿ ಎಂದು ಹೇಳುವುದಿಲ್ಲ. ಆದುದರಿಂದ ಜಗದಂಬಾ ಮಹಿಮೆ ಶ್ರೇಷ್ಠವಾಗಿದೆ. ಜಗದಂಬಾರವರ ಮೇಳ ಬಹಳ ದೊಡ್ಡದಾಗಿ ನಡೆಯುತ್ತದೆ. ಲಕ್ಷ್ಮೀಯನ್ನು ದೀಪಾವಳಿಯೆಂದು ಆಹ್ವಾನ ಮಾಡುತ್ತಾರೆ. ಇದು ಆತ್ಮ-ಪರಮಾತ್ಮನೊಂದಿಗೆ ಮಿಲನದ ಮೇಳವಾಗಿದೆ. ಈ ಮಾತುಗಳನ್ನು ಯಾವ ಮನುಷ್ಯರೂ ಸಹ ತಿಳಿದುಕೊಂಡಿಲ್ಲ. ಈ ಮಾತುಗಳನ್ನು ತಿಳಿಸಿಕೊಡುವಂತಹವರು ತುಂಬಾ ಬುದ್ಧಿವಂತರಾಗಿದ್ದು, ಉಪಾಯದಿಂದ, ಪ್ರೀತಿಯಿಂದ ಕೆಲಸ ಮಾಡಬೇಕಾಗುತ್ತದೆ, ಇದು ಸತ್ಯವೆಂದು ಎಂದು ಎಂತಹವರಾದರೂ ತಿಳಿದುಕೊಳ್ಳಬೇಕು. ಶ್ರೀಲಕ್ಷ್ಮೀ ಎಷ್ಟೊಂದು ಸುಂದರವಾಗಿದ್ದರು! ಯಾರು ಲಕ್ಷ್ಮೀ-ನಾರಾಯಣರನ್ನು ಹೆಚ್ಚು ಪೂಜಿಸುತ್ತಾರೆ, ಅವರು ಪಕ್ಕಾ ವೈಷ್ಣವರಾಗಿರುತ್ತಾರೆ. ಜಗದಂಬಾ ಸಹ ವೈಷ್ಣವರಾಗಿದ್ದಾರೆ. ತಂದೆಯು ಅವರಿಗೆ ರಾಜಯೋಗವನ್ನು ಕಲಿಸಿ ಮನುಷ್ಯರಿಂದ ದೇವತೆಯನ್ನಾಗಿ ಮಾಡಿದ್ದಾರೆ. ಈಗ ಶರೀರ ಅಪವಿತ್ರರಾಗಿರುವ ಕಾರಣ ನಿಮಗೆ ಪೂಜೆ ನಡೆಯುವುದಿಲ್ಲ. ನೀವು ಸಂಪೂರ್ಣರಾಗಿ ಬಿಟ್ಟಾಗ ಪರಿವರ್ತನೆಯಾಗಿ ಪೂಜೆಗೆ ಯೋಗ್ಯರಾಗಿ ಬಿಡುತ್ತೀರಿ. ವಾಸ್ತವಿಕವಾಗಿ ಸನ್ಯಾಸಿಗಳನ್ನೂ ಸಹ ಪೂಜಿಸಬಾರದು. ಈಗಿನ ಕಾಲದಲ್ಲಿ ಸನ್ಯಾಸಿಗಳು ಶಿವೋಹಂ ಎಂದು ಹೇಳಿ ಪೂಜೆ ಮಾಡಿಸಿಕೊಳ್ಳುತ್ತಾರೆ. ಅವರಲ್ಲಿಯೂ ಪೂಜೆ ಮಾಡಿಸಿಕೊಳ್ಳದ ಒಂದು ಮತವಿದೆ. ಶಿವನಂತೂ ನಿರಾಕಾರನಾಗಿದ್ದಾರೆ ಆದುದರಿಂದ ಸನ್ಯಾಸಿಗಳು ತಮ್ಮ ಪೂಜೆಯನ್ನು ಹೇಗೆ ಮಾಡಿಸಿಕೊಳ್ಳಲು ಸಾಧ್ಯ? ನೋಡಿ ಶಿವ ತಂದೆ ಬ್ರಹ್ಮಾ ತಂದೆಯ ಶರೀರದಲ್ಲಿ ಬರುತ್ತಾರೆ. ಬ್ರಹ್ಮಾ ತಂದೆ ಎಂದಿಗೂ ತಮ್ಮ ಪೂಜೆಯನ್ನು ಮಾಡಿಸಿಕೊಳ್ಳುವುದಿಲ್ಲ. ತಂದೆಯು ಬಂದು ನಮ್ಮನ್ನು ಪೂಜಾರಿಗಳಿಂದ ಪೂಜ್ಯರನ್ನಾಗಿ ಮಾಡುತ್ತಾರೆ. ಪೂಜೆ ಮಾಡುವುದನ್ನು ಹೇಗೆ ಕಲಿಸುತ್ತಾರೆ. ಶಿವ ತಂದೆಯು ಈ ರೀತಿ ಮಾಡಲು ಅವಕಾಶ ಕೊಡುವುದಿಲ್ಲ, ಮುಖದಿಂದ ರಾಮ-ರಾಮನೆಂದು ಹೇಳುವುದನ್ನೂ ಸಹ ಬೇಡ ಎನ್ನುತ್ತಾರೆ. ಕೇವಲ ನನ್ನನ್ನು ನೆನಪು ಮಾಡಿ ಎಂದು ಹೇಳುತ್ತಾರೆ. ನೆನಪು ಮಾಡುವುದೆಂದರೆ ಜಪ ಮಾಡುವುದು ಎಂದರ್ಥವಲ್ಲ. ಮಕ್ಕಳಿಗೆ ತಂದೆಯು ಆಸ್ತಿಯನ್ನು ಕೊಡುತ್ತಾರೆ.

ಎಂದಾದರೂ ಮಕ್ಕಳು ತನ್ನ ತಂದೆಯನ್ನು ಜಪ ಮಾಡುತ್ತಾರೇನು? ನೀವೂ ಸಹ ಜಪ ಮಾಡಬಾರದು. ಜಪ ಮಾಡುವುದಕ್ಕೂ, ನೆನಪು ಮಾಡುವುದಕ್ಕೂ ಹಗಲು-ರಾತ್ರಿ ಅಂತರವಿದೆ. ತಿಳಿಸಿಕೊಡಲು ಅನೇಕ ಹೊಸ-ಹೊಸ ಮಾತುಗಳು ಸಿಗುತ್ತಿರುತ್ತವೆ. ಇವರು ತಂದೆ ಆಗಿದ್ದಾರೆ ಎನ್ನುವುದೂ ಸಹ ತಿಳಿದುಕೊಳ್ಳುವ ಮಾತಾಗಿದೆ. ಇವರಿಂದ ನಮಗೆ ಬೇಹದ್ದಿನ ಆಸ್ತಿ ಸಿಗುತ್ತದೆ ಹಾಗೂ ಲೌಕಿಕ ತಂದೆಯಿಂದ ಹದ್ದಿನ ಆಸ್ತಿ ಸಿಗುತ್ತದೆ. ಈ ಪಾರಲೌಕಿಕ ತಂದೆಯು ಕಲ್ಪದ ಮೊದಲೂ ಸಹ ಆಸ್ತಿ ಕೊಟ್ಟಿದ್ದರು, ಈಗ ಪುನಃ ಕೊಡಲು ಬಂದಿದ್ದಾರೆ. ಬುದ್ಧಿಯಲ್ಲಿ ಮನುಷ್ಯರಿಂದ ದೇವತೆ ಆಗುವ ಚಿಂತನೆ ಮಾಡಬೇಕು. ಈ ರೀತಿ ಜ್ಞಾನಮಾರ್ಗದಲ್ಲಿ ತಿಳಿಸಿಕೊಡುವಂತಹ ಶ್ರಮ ಪಡಬೇಕು. ಇದರಿಂದ ಮನುಷ್ಯರ ಜೀವನ ವಜ್ರ ಸಮಾನ ಆಗಿ ಬಿಡುತ್ತದೆ. ಅನೇಕ ಪ್ರಕಾರದ ದುಃಖಿಗಳಿದ್ದಾರೆ, ಪರಸ್ಪರ ಯುದ್ಧ ಮಾಡುತ್ತಿರುತ್ತಾರೆ. ತಂದೆ ಬಂದು ನಮ್ಮನ್ನು ಈಶ್ವರೀಯ ಸಂಪ್ರದಾಯದವರನ್ನಾಗಿ ಮಾಡುತ್ತಾರೆ. ಆದುದರಿಂದ ಇಲ್ಲಿ ಯುದ್ಧದ ಮಾತಿಲ್ಲ, ಈಶ್ವರನ ಸಭೆಯಲ್ಲಿ ಅಸುರರು ಬರುವ ಹಾಗಿಲ್ಲ. ವಿಕಾರಿಗಳು ಇಲ್ಲಿ ಕುಳಿತುಕೊಳ್ಳಲು ಸಾಧ್ಯವಿಲ್ಲ. ಮಕ್ಕಳೇ ಎಂದಿಗೂ ಜಗಳ-ಯುದ್ಧ ಮಾಡಿ ಸದ್ಗುರುವಿನ ನಿಂದಕರಾಗಿ ಶ್ರೇಷ್ಠ ಪದವಿಯನ್ನು ಪಡೆದುಕೊಳ್ಳುವುದರಿಂದ ವಂಚಿತರಾಗಬೇಡಿ. ಸದ್ಗುರು ನಮ್ಮನ್ನು ಸ್ವರ್ಗದ ಮಾಲೀಕರನ್ನಾಗಿ ಮಾಡುತ್ತಾರೆ, ಅವರ ನಿಂದನೆಗೆ ನಿಮಿತ್ತರಾದರೆ ಶ್ರೇಷ್ಠ ಪದವಿ ಪಡೆದುಕೊಳ್ಳಲು ಸಾಧ್ಯವಿಲ್ಲ. ಎಲ್ಲಾ ಮಾತುಗಳು ಸಂಗಮಯುಗದ ಮಾತುಗಳಾಗಿವೆ. ಆದರೆ ಇವುಗಳನ್ನು ಸನ್ಯಾಸಿಗಳು ಮನುಷ್ಯರನ್ನು ಭಯ ಪಡಿಸಲು ತಮ್ಮ ಮೇಲೆ ಹಾಕಿಕೊಂಡಿದ್ದಾರೆ. ಇಲ್ಲಿ ನೀವು ಸಂಪೂರ್ಣ ಪವಿತ್ರರಾಗಬೇಕು. ಲೌಕಿಕದಲ್ಲಿ ಗುರುಗಳನ್ನು ಮಾಡಿಕೊಂಡರೂ ಸಹ ಯಾರೂ ಪವಿತ್ರರಾಗಿರುವುದಿಲ್ಲ. ಗೃಹಸ್ಥಿಗಳನ್ನು ಗುರು ಮಾಡಿಕೊಳ್ಳುವದರಿಂದ ಏನು ಲಾಭವಿಲ್ಲ. ಇದು ಪ್ರಜೆಗಳ ರಾಜ್ಯವಾಗಿದೆ. ನಂತರ ದೈವೀ ರಾಜ್ಯವನ್ನು ಮಾಡಲು ಬಹಳ ಸಮರ್ಥರು ಬೇಕಾಗುತ್ತದೆ. ತಂದೆಯೂ ಅಸುರೀ ಜಗತ್ತನ್ನು ದೈವೀ ಜಗತ್ತನ್ನಾಗಿ ಮಾಡಲು ಬಂದಿದ್ದಾರೆ. ದೈವೀ ಧರ್ಮ ಸ್ಥಾಪನೆಯಾದ ನಂತರ ಈ ಎಲ್ಲಾ ಧರ್ಮಗಳು ಸಮಾಪ್ತಿಯಾಗಿ ಬಿಡುತ್ತವೆ. ಭಗವಂತನೇ ಬಂದು ಫಲ ಕೊಡುತ್ತಾರೆಂದು ಹೇಳುತ್ತಾರೆ, ಇದರಿಂದ ಸಿದ್ಧವಾಗುತ್ತದೆ ಯಾರೂ ಸಹ ನಿರ್ವಾಣಧಾಮಕ್ಕೆ ಹಿಂತಿರುಗಿ ಹೋಗಿಲ್ಲ. ತಂದೆಯೇ ಬಂದು ರಾಜಯೋಗವನ್ನು ಕಲಿಸಿಕೊಡುತ್ತಾರೆ. ನಾನು ನಿಮ್ಮ ಪರಮಪಿತ ಪರಮಾತ್ಮನಾಗಿದ್ದೇನೆಂದು ತಂದೆ ತಿಳಿಸುತ್ತಾರೆ. ನಾನು ಮಾತ್ರ ಬಂದು ರಾಜಯೋಗವನ್ನು ಕಲಿಸಿಕೊಡುತ್ತೇನೆ. ನೀವು ಪುನಃ ಬೇರೆಯವರಿಗೆ ತಿಳಿಸಿಕೊಡಬೇಕು ಆದರೆ ತಿಳಿಸಿಕೊಡುವವರು ಒಂದೇ ರೀತಿಯಲ್ಲಿ ಇರುವುದಿಲ್ಲ. ನೀವು ಪುಸ್ತಕದಲ್ಲಿ ಬರೆದುಕೊಂಡಿರಬೇಕು, ಚೆನ್ನಾಗಿ ಭಾಷಣ ಮಾಡುವಂತಹವರಿಗೂ ಸಹ ಈ ಎಲ್ಲಾ ಪಾಯಿಂಟ್ಸ್ ನೆನಪಿಗೆ ಬರುವುದಿಲ್ಲ ನಂತರ ನೆನಪಿಗೆ ಬರುತ್ತದೆ. ಆದುದರಿಂದ ಅಗತ್ಯವಾಗಿ ಬರೆದಿಟ್ಟುಕೊಳ್ಳಬೇಕು ಆದರೆ ನೋಟ್ ಮಾಡಿಕೊಂಡರೂ ಸಹ ಹೇಳದೇ ಇದ್ದಾಗ ಏನೂ ಓದಿಕೊಂಡಿರುವುದಿಲ್ಲವೆಂದು ಅರ್ಥವಾಗುತ್ತದೆ. ಧಾರಣೆಯೂ ಸಹ ಶ್ರೀಮತದಂತೆ ನಡೆದಾಗ ಆಗುತ್ತದೆ. ಅಮೃತವೇಳೆ ಎಚ್ಚರವಾಗಿ ತಂದೆಯನ್ನು ನೆನಪು ಮಾಡಬೇಕು. ನಂತರ ಪಾಯಿಂಟ್ಸನ್ನು ರಿಪೀಟ್ ಮಾಡುತ್ತಾ ಬೇರೆಯವರಿಗೆ ತಿಳಿಸಿಕೊಡುವುದರಿಂದ ಶ್ರೇಷ್ಠ ಪದವಿಯನ್ನು ಪಡೆಯಬಹುದು. ರಾಜಾ ಆಗುವುದು ಚಿಕ್ಕಮ್ಮನ ಮನೆಯಷ್ಟು ಸುಲಭವಲ್ಲ. ತಿಳಿಯುತ್ತಲ್ಲವೆ. ಬಹಳ ಶ್ರಮ ಪಡಬೇಕಾಗುತ್ತದೆ. ಒಳ್ಳೆಯದು.

ಮಧುರಾತಿ ಮಧುರ ಅಗಲಿ ಹೋಗಿ ಮರಳಿ ಸಿಕ್ಕಿರುವ ಮಕ್ಕಳ ಪ್ರತಿ ಮಾತಾಪಿತಾ ಬಾಪ್‌ದಾದಾರವರ ನೆನಪು, ಪ್ರೀತಿ ಹಾಗೂ ಸುಪ್ರಭಾತ. ಆತ್ಮಿಕ ಮಕ್ಕಳಿಗೆ ಆತ್ಮಿಕ ತಂದೆಯ ನಮಸ್ತೆ.

ಧಾರಣೆಗಾಗಿ ಮುಖ್ಯಸಾರ:

1. ಪೂಜ್ಯರಾಗಲು ಸಂಪೂರ್ಣ ಪುರುಷಾರ್ಥ ಮಾಡಬೇಕು. ಎಂದಿಗೂ ತಮ್ಮ ಪೂಜೆಯನ್ನು ಮಾಡಿಸಿಕೊಳ್ಳಬಾರದು. ಶರೀರ ಹಾಗೂ ಆತ್ಮ ಎರಡು ಪವಿತ್ರವಾದಾಗ, ಪೂಜ್ಯನೀಯ ಪದವಿಗೆ ಯೋಗ್ಯರಾಗುತ್ತೇವೆ.

2. ಬಹಳ ಬುದ್ಧಿವಂತರು ಜ್ಞಾನಿಗಳಾಗಿ ಕಲ್ಯಾಣದ ಭಾವನೆಯನ್ನು ಇಟ್ಟು ಸೇವೆಯನ್ನು ಮಾಡಬೇಕು. ದೈವೀ ಗುಣಗಳುಳ್ಳ ಸತ್ಯ ವೈಷ್ಣವರಾಗಬೇಕು.

ವರದಾನ: ಪರಮಾತ್ಮನ ಪ್ರೀತಿಯಲ್ಲಿ ಧರಣಿಯ ಆಕರ್ಷಣೆಯಿಂದ ಮೇಲೆ ಹಾರುವಂತಹ ಮಾಯಾಮುಕ್ತ ಭವ.

ಪರಮಾತ್ಮನ ಪ್ರೀತಿಯು ಧರಣಿಯ ಆಕರ್ಷಣೆಯಿಂದ ಮೇಲಕ್ಕೆ ಹಾರುವ ಸಾಧನವಾಗಿದೆ. ಯಾರು ಈ ದೇಹಾಭಿಮಾನವೆಂಬ ಧರಣಿಯ ಆಕರ್ಷಣೆಯಿಂದ ದೂರವಿರುತ್ತಾರೆಯೋ, ಅವರನ್ನು ಮಾಯೆಯು ತನ್ನ ಕಡೆ ಸೆಳೆಯಲು ಸಾಧ್ಯವಿಲ್ಲ. ಯಾವುದೆಷ್ಟಾದರೂ ಆಕರ್ಷಣೀಯವಾಗಿ ಇರಲಿ ಆದರೆ ಮಾಯೆಯ ಆಕರ್ಷಣೆಯು ಹಾರುವ ಕಲೆಯಲ್ಲಿರುವ ತಮ್ಮ ಬಳಿ ತಲುಪುವುದಕ್ಕೂ ಸಾಧ್ಯವಿಲ್ಲ. ಹೇಗೆ ರಾಕೆಟ್ ಧರಣಿಯ ಆಕರ್ಷಣೆಯಿಂದ ಆಚೆಯಿರುತ್ತದೆಯೋ ಹಾಗೆಯೇ ತಾವೂ ಸಹ ಆಚೆಯಿದ್ದು ಬಿಡಿ, ಇದರ ವಿಧಿಯೇನೆಂದರೆ- ಭಿನ್ನರಾಗಿರುವುದು ಅಥವಾ ಒಬ್ಬ ತಂದೆಯ ಪ್ರೀತಿಯಲ್ಲಿ ಸಮಾವೇಶವಾಗಿರುವುದು. ಇದರಿಂದ ಮಾಯಾ ಮುಕ್ತರು ಆಗಿ ಬಿಡುತ್ತೀರಿ.

ಸ್ಲೋಗನ್: ಸ್ವ-ಸ್ಥಿತಿಯನ್ನು ಇಷ್ಟೂ ಶಕ್ತಿಶಾಲಿ ಮಾಡಿಕೊಳ್ಳಿರಿ, ಅದರಿಂದ ತಮ್ಮನ್ನು ಯಾವುದೇ ಪರಿಸ್ಥಿತಿಗಳು ಏರುಪೇರು

ಮಾಡಲು ಸಾಧ್ಯವಾಗಬಾರದು.

ಅಮೂಲ್ಯ ಜ್ಞಾನರತ್ನ- (ದಾದಿಯರ ಹಳೆಯ ಡೈರಿಯಿಂದ)

ಜ್ಞಾನವೇ ಖುಷಿಯ ಬುನಾದಿ ಅಥವಾ ಮೂಲವಾಗಿದೆ, ಆ ಬುನಾದಿ ಆಧಾರದಿಂದಲೇ ಇಡೀ ಜೀವನವೆಂಬ ವೃಕ್ಷದ ಆಧಾರವಿದೆ. ಒಂದುವೇಳೆ ಬುನಾದಿಯು ಪರಿಪಕ್ವವಾಗಿ ಇರದಿದ್ದರೆ, ಆ ಖುಷಿಯು ಅಲ್ಪಕಾಲದ್ದಾಗಿ ಬಿಡುತ್ತದೆ. ಹೇಗೆ ಮಾಯಾವಿ ಮನುಷ್ಯರು ಹೇಳುತ್ತಾರೆ - ನಾವು ಖುಷಿಯಲ್ಲಿದ್ದೇವೆ ಏಕೆಂದರೆ ನಮ್ಮ ಬಳಿ ಹಣ ಪದಾರ್ಥವೆಲ್ಲವೂ ಇದೆ. ಆದರೆ ನಮಗೆ ಗೊತ್ತಿದೆ- ಅವರು ಸರ್ವಕಾಲಕ್ಕಾಗಿ ಸ್ಥಿರವಾದ ಖುಷಿಯಲ್ಲಿರಲು ಸಾಧ್ಯವಿಲ್ಲ ಏಕೆಂದರೆ ಅವರ ಬಳಿ ಜ್ಞಾನದ ಬುನಾದಿಯೇ ಇಲ್ಲ. ಇದು ಹೇಗಾಯಿತೆಂದರೆ - ಹೇಗೆ ಯಾವುದೇ ಸಾಹುಕಾರನು ಫಲದ ಸಂಪತ್ತನ್ನು ತೆಗೆದುಕೊಂಡು ತಾನೇ ತಿನ್ನುವಂತೆ. ಮತ್ತು ಅದರ ಸಿಪ್ಪೆಯನ್ನು ಎಸೆಯುತ್ತಾನೆಂದರೆ, ಅದನ್ನು ಯಾವುದಾದರೂ ಬಡವ ತೆಗೆದುಕೊಂಡು ನಮ್ಮ ಬಳಿಯೂ ಸಂಪತ್ತಿದೆ ಎಂದು ಖುಷಿಯಾಗಿ ಬಿಡುತ್ತಾನೆ. ಆದರೆ ವಾಸ್ತವದಲ್ಲಿ ಸಂಪತ್ತನ್ನು ಮಾಲೀಕನೆ ಅನುಭವಿಸುತ್ತಾರೆ. ಅದೇ ರೀತಿ ನಾವು ಈ ಅಲ್ಪಕಾಲದ ಮಾಯಾವಿ ಸುಖಗಳನ್ನು ಕನಿಷ್ಟವೆಂದು ತಿಳಿದು, ಅವಿನಾಶಿ ಜ್ಞಾನದಿಂದ ಈಶ್ವರೀಯ ಸ್ಥಿರವಾದ ಅತೀಂದ್ರಿಯ ಸುಖವನ್ನು ಪ್ರಾಪ್ತಿ ಮಾಡಿಕೊಳ್ಳುತ್ತಿದ್ದೇವೆ ಮತ್ತು ಅವರು ಅಲ್ಪಕಾಲದ ಕ್ಷಣದ ಸುಖ ಕೊಡುವಂತಹ ಮಾಯೆಯ ಹಿಂದೆ ಸಿಲುಕಿಕೊಂಡು, ಅದನ್ನೇ ಸುಖವೆಂದು ತಿಳಿದು ಅನುಭವಿಸುತ್ತಾ ಕುಳಿತಿದ್ದಾರೆ ಹಾಗೂ ಇದೇ ಅಭಿಮಾನದಲ್ಲಿರುತ್ತಾರೆ - ನಮ್ಮ ಬಳಿಯೂ ಹಲವು ಸಂಪತ್ತಿದೆ. ಒಳ್ಳೆಯದು. ಓಂ ಶಾಂತಿ.